# ಆದಿವಾಸಿ ಶಾಲಾ ಪ್ರಕ್ರಿಯೆಯಲ್ಲಿ 'ಸ್ವ'ಪ್ರಜ್ಞೆ ಮತ್ತು ಅಸ್ಮಿತೆಯನ್ನು ಮರುಕಟ್ಟುವುದು

ಅಮ್ಮನ್ ಮದನ್

ತರಗತಿಯಲ್ಲಿ ದೈನಂದಿನ ಜೀವನದ ಅನುಭವಗಳ ಸಮಾಜಶಾಸ್ತ್ರೀಯ ಅಧ್ಯಯನವು ವಿದ್ಯಾರ್ಥಿಗಳು ಹೇಗೆ ಕಲಿಯುತ್ತಾರೆ ಅಥವಾ ಹೇಗೆ ಕಲಿಯುವುದಿಲ್ಲ ಎಂಬುದರ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸಿದೆ. ಮಕ್ಕಳು ಯಾಂತ್ರಿಕ ಜೀವಿಗಳಲ್ಲ. ಅವರು ಶಾಲೆಯ ಶಿಕ್ಷಕರು ಮತ್ತು ವಿಷಯಗಳನ್ನು ಕುರಿತ ತಮ್ಮ ಭಾವನೆಗಳನ್ನು ಮತ್ತು ವಿಚಾರಗಳನ್ನು ಹಲವು ಸಾಮಾಜಿಕ ಒಡನಾಟಗಳ ಮೂಲಕ ರೂಪಿಸಿಕೊಳ್ಳುತ್ತಾರೆ. ಸಮಾಜದಲ್ಲಿ ಮಗುವಿಗೆ ದಕ್ಕುವ ಅನುಭವಗಳು, ಭೂಗೋಳಶಾಸ್ತ್ರವು ನೀರಸವಾದ ವಿಷಯವೆಂದೋ, ಇತಿಹಾಸವು ರೋಚಕ-ವಾದುದೆಂದೋ ಭಾವಿಸುವಂತೆ ಮಾಡಬಹುದಾಗಿದೆ. ಶಾಲಾ ಭಾಷೆಯೇ ತನ್ನ ಮನೆಯ ಆಡುಭಾಷೆಯಾಗಿರುವ ಹಾಗೂ ಮನೆಯಲ್ಲಿ ಇತಿಹಾಸದ ವಿಚಾರಗಳ ಬಗ್ಗೆ ಚರ್ಚೆ, ಸಂವಾದಗಳು ಕಿವಿಯ ಮೇಲೆ ಬೀಳುತ್ತಿರುವಂತಹ ಮಗುವಿಗೆ ಶಾಲೆಯಲ್ಲೂ ಆ ವಿಷಯದ ಬಗ್ಗೆ ಆಸಕ್ತಿ ಹುಟ್ಟುವುದನ್ನು ಕಾಣಬಹುದು. ಅಂತಹ ಮಗುವು ಶಿಕ್ಷಕರ ಹಾಗು ತನ್ನ ತರಗತಿಯ ಸಹಪಾಠಿಗಳ ಎದುರು ನಿಂತು ಮಾತನಾಡುತ್ತದೆ ಮತ್ತು ಉಳಿದವರಿಗೆ ತಿಳಿದಿರದ ವಿಷಯಗಳನ್ನು ಹೇಳಿ, ಅವರ ಗೌರವಾದರಗಳನ್ನು ಗಳಿಸಬಹುದು. ಆಗ ಆ ಮಗುವಿನ ಆತ್ಮಾಭಿಮಾನ ಹೆಚ್ಚಾಗುತ್ತದೆ. ಅದೇ, ಮನೆಯ ಆಡುಭಾಷೆ ಶಾಲೆಯ ಭಾಷೆಯಾಗಿರದ ಮಗುವು ತರಗತಿಯಲ್ಲಿ ಹೆಣಗುವುದು ಮತ್ತು ಎಡವುವುದು ಸಾಮಾನ್ಯ. ಒಂದು ಮಗುವಿಗೆ ಆರ್ಯಭಟನ ಬಗ್ಗೆ ಮೊದಲೇ ತಿಳಿದಿರದಿದ್ದರೆ, ಅದು ಮೌನವಾಗಿರಬಹುದು ಮತ್ತು ತರಗತಿಯಲ್ಲಿ ಆರ್ಯಭಟನ ಬಗ್ಗೆ ತಿಳಿದಿರುವ ಉಳಿದವರ ಸಡಗರ, ಕೋಲಾಹಲಗಳಿಂದ ಅವಮಾನಕ್ಕೆ ಗುರಿಯಾದ ಆ ವಿಷಯದ ಭಾವನೆಯನ್ನು ಅನುಭವಿಸಬಹುದು.

ಇಂತಹ ಮುಖಾಮುಖಿಗಳಲ್ಲಿ ರೂಪತಳೆಯುವ ಅರ್ಥಗಳು ಮತ್ತು ಭಾವನೆಗಳು, ನಿಧಾನವಾಗಿ ಒಂದಕ್ಕೊಂದು ಕೂಡಿಕೊಳ್ಳುತ್ತಾ ಶಾಲೆ ಹಾಗು ಶಾಲೆಯ ಜ್ಞಾನಸಂಚಯದ ಕಡೆಗೆ ವಿದ್ಯಾರ್ಥಿಗಳ ದೃಷ್ಟಿಕೋನವನ್ನು ರೂಪಿಸುತ್ತದೆ. ಮಗುವಿನ ಕಲಿಕೆಯನ್ನು ಪ್ರೋತ್ಸಾಹಿಸಿ ಅದನ್ನು ಸಮೃದ್ಧಗೊಳಿಸುವಂತೆ ತರಗತಿಯಲ್ಲಿನ ಪರಸ್ಪರ ಸಂವಾದಗಳನ್ನು ಮತ್ತು ಅಲ್ಲಿ ಹೊರಹೊಮ್ಮುವ ಅರ್ಥಗಳನ್ನು ಕಟ್ಟಿಕೊಡುವುದು ಹೇಗೆ ಎನ್ನುವುದೇ ಇಲ್ಲಿ ಶಿಕ್ಷಕರಿಗೆ ಮತ್ತು ಬೋಧಕರಿಗೆ ಇರುವ ಸವಾಲಾಗಿದೆ. ಜೊತೆ-ಜೊತೆಗೆ, ಮಗುವು ಕುಬ್ಜಗೊಳ್ಳುವಂತೆ ಆಗುವ, ಅದರ ಕಲಿಕೆಗೆ ಗರಬಡಿಸಬಹುದಾದ ಅರ್ಥಗಳನ್ನು, ಪರಸ್ಪರ ಒಡನಾಟಗಳನ್ನು ಕಟ್ಟಿಕೊಡುವ ಸಾಧ್ಯತೆಯ ಬಗ್ಗೆಯೂ ಅವರು ಎಚ್ಚರಿಕೆಯಿಂದ ಇರಬೇಕಾಗುತ್ತದೆ.

ತರಗತಿ ಹಾಗೂ ವಿದ್ಯಾರ್ಥಿಗಳ ದೈನಂದಿನ ಜೀವನವನ್ನು ಅರಿಯಲು ಸಮಾಜಶಾಸ್ತ್ರ ಹಾಗು ಮಾನವಶಾಸ್ತ್ರಗಳು ಅನೇಕ ಸೈದ್ಧಾಂತಿಕ ವಿಧಾನಗಳನ್ನು ಅಭಿವೃದ್ಧಿಗೊಳಿಸಿವೆ. ಸದ್ಯದ ಜಗತ್ತಿನ ಸನ್ನಿವೇಶದಲ್ಲಿ ಏನಾಗುತ್ತಿದೆ ಅಥವಾ ಏನಾಗುತ್ತಿಲ್ಲ ಎಂದು ಕಲ್ಪಿಸಿಕೊಂಡು ವಿಶಿಷ್ಟ ಪರಿಕಲ್ಪನೆಗಳ ಮೂಲಕ ನೋಡುವ ಒಂದು ಬಗೆಯೇ ಸೈದ್ಧಾಂತಿಕ ವಿಧಾನವಾಗಿದೆ. ಸೈದ್ಧಾಂತಿಕ ವಿಧಾನಗಳನ್ನು ಬಳಸಿ, ಈ ಹಿಂದೆ ನಾವು ಗಮನಿಸಿರದ ಸಂಗತಿಗಳನ್ನು ನೋಡಬಹುದಾಗಿದೆ. ಈ ಲೇಖನದಲ್ಲಿ, ಒಂದು ಪ್ರಮುಖ ಸೈದ್ಧಾಂತಿಕ ವಿಧಾನವನ್ನು ವಿವರಿಸಲಾಗಿದೆ. ನೀಲಗಿರಿ ಬೆಟ್ಟಗಳ ಆದಿವಾಸಿ ಮಕ್ಕಳ ನಡುವೆ ಕಾರ್ಯನಿರತವಾಗಿರುವ 'ಆದಿವಾಸಿ ಮುನ್ನೇಟ್ರ ಸಂಗಮ್' (ಎ. ಎಮ್.ಎಸ್)ನ ಕಾರ್ಯವನ್ನು ಇಲ್ಲಿ ವಿವರಿಸಲಾಗಿದ್ದು, ಇವು ಶಿಕ್ಷಣ ಕ್ಷೇತ್ರದ ಸವಾಲುಗಳನ್ನು ಅರಿಯಲು ನಮಗೆ ಹೇಗೆ ನೆರವಾಗುತ್ತದೆ ಎಂದು ಚರ್ಚಿಸಲಾಗಿದೆ.

## ಆದಿವಾಸಿ ಮುನ್ನೇಟ್ರ ಸಂಗಮ್

### ಹಿನ್ನೆಲೆ ಹಾಗು ಇತಿಹಾಸ

ಆದಿವಾಸಿ ಮುನ್ನೇಟ್ರ ಸಂಗಮ್ ಕಳೆದ ಹಲವು ದಶಕಗಳಿಂದ ನೀಲಗಿರಿ ಕಾಡುಗಳ ಆಸುಪಾಸಿನಲ್ಲಿ ಬದುಕುತ್ತಿರುವ ಆದಿವಾಸಿಗಳೊಡನೆ ಕಾರ್ಯನಿರತವಾಗಿದೆ. ಈ ಕಾಡುಗಳಲ್ಲಿ ಐದು ಬುಡಕಟ್ಟುಗಳಿವೆ: ಪಣಿಯರು, ಬೆಟ್ಟಕುರುಂಬರು, ಮುಳ್ಳುಕುರುಂಬರು, ಕಟ್ಟುನಾಯಕರು ಹಾಗು ಇರುಳರು. ಇವರು ಜೀವನೋಪಾಯಕ್ಕಾಗಿ ಈ ಮುನ್ನ ಬೇಟೆಯಾಡಿ, ಆಹಾರ ಸಂಗ್ರಹಣೆ ಮಾಡುವ, ಬೇಸಾಯ ಮಾಡುವ ಹಾಗು ಈ ಪ್ರದೇಶದ ತೋಟಗಳಲ್ಲಿ ದುಡಿಮೆಯಂತಹ ಕಸುಬುಗಳಲ್ಲಿ ತೊಡಗಿದ್ದರು. ಕಾಡುಗಳು ಅವರ ಜೀವನಕ್ಕೆ ಅವಿಭಾಜ್ಯವಾಗಿದ್ದು, ಈ ಕಾಡುಗಳಿಂದ ಬದುಕಿಗಾಗಿ ಅವರು ಭೌತಿಕ ಹಾಗು ಆಧ್ಯಾತ್ಮಿಕ ಎರಡೂ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದರು. ಅವರ ಪ್ರದೇಶಕ್ಕೆ ತಮಿಳುನಾಡು, ಕೇರಳ ಹಾಗು ಶ್ರೀಲಂಕಾಗಳಿಂದ ಹೆಚ್ಚು-ಹೆಚ್ಚು ಸಂಖ್ಯೆಯಲ್ಲಿ ಹೊರಗಿನವರು ಬರತೊಡಗಿದ್ದರಿಂದ ಆದಿವಾಸಿಗಳು ಹೆಚ್ಚು-ಹೆಚ್ಚಾಗಿ ಕಾಡುಗಳ ದಟ್ಟಭಾಗವನ್ನು ಆಶ್ರಯಿಸು-ವಂತಾಯಿತು. ಕಾಡುಗಳು ಕ್ಷೀಣಿಸುತ್ತಿದ್ದಂತೆಯೇ ಅವರ ಜೀವನವೂ ಆಶಾರಹಿತವಾಗತೊಡಗಿತು. ಸಾಲದೆಂಬಂತೆ, ಸರ್ಕಾರವೂ ಕಾಡಿನೊಳಕ್ಕೆ ಅವರ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಿತು. ಕ್ರಮೇಣ, ಈ ಪ್ರದೇಶದ ಆದಿವಾಸಿಗರಲ್ಲಿ ಪೌಷ್ಟಿಕಾಂಶದ ಕೊರತೆ, ಚಿಂತೆ, ಖಿನ್ನತೆಗಳು ವ್ಯಾಪಕವಾಗಿ ಮನೆಮಾಡಿತು. ಕಳೆದ ಶತಮಾನದ ೭೦ರ ದಶಕದಲ್ಲಿ "ಸಮುದಾಯ ಸಂಘಟನೆ, ಪುನರ್ವಸತಿ ಹಾಗು ಅಭಿವೃದ್ಧಿಗಾಗಿ ಕಾರ್ಯ" (ACCORD) ಎಂಬ ಸಂಘಟನೆಯು ಇಲ್ಲಿ ತನ್ನ ಕಾರ್ಯಾರಂಭಿಸಿತು. ಅದೇ ಸಮಯಕ್ಕೆ ಆದಿವಾಸಿ ಮುನ್ನೇಟ್ರ ಸಂಗಮ್, ಭೂಮಿಯನ್ನು ಮರಳಿ ಪಡೆಯಲು, ಕಾಡುಗಳನ್ನು ಬಳಸಲು ತಮಗಿರುವ ಹಕ್ಕಿಗಾಗಿ ಧ್ವನಿಯೆತ್ತಲು ಆದಿವಾಸಿಗಳನ್ನು ಸಂಘಟಿಸತೊಡಗಿತು. ಹಲವು ವರ್ಷಗಳಿಂದ ಇವು ಆದಿವಾಸಿ ಸಂಸ್ಕೃತಿಯನ್ನು ಬಲಪಡಿಸಿ ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಕಾಡುವಾಸಿಗಳು ನಗರವಾಸಿಗ-ಳೊಂದಿಗೆ ಹಾಗು ಸರ್ಕಾರದೊಂದಿಗೆ ಹೊಂದಾಣಿಕೆಯಿಂದ ಬಾಳುವಂತಾಗಲು ಅವರಿಗೆ ಅಗತ್ಯವಿರುವ ಸಹಾಯಹಸ್ತ ಚಾಚಿದೆ.

ಘನತೆ ಹಾಗು ಜೀವನೋಪಾಯಗಳಿಗಾಗಿ ನಡೆಯುತ್ತಿರುವ ಆದಿವಾಸಿ ಹೋರಾಟದ ಹೃದಯಭಾಗದಲ್ಲಿ ಸಂಸ್ಕೃತಿಯ ವಿಚಾರವಿದ್ದು, ಹಾಗಾಗಿ ಈ ಹೋರಾಟದಲ್ಲಿ ಶಿಕ್ಷಣವು ಒಂದು ಮುಖ್ಯ ಕಾಳಜಿಯಾಗಿದೆ ಎಂದು ಆದಿವಾಸಿ ಮುನ್ನೇತ್ರ ಸಂಗಮ್ ಮನಗಂಡಿದೆ. ಆದಿವಾಸಿಗಳು ಬೆಳೆದು ವಯಸ್ಕರಾಗಲು, ಅವರ ಜಗತ್ತಿನಲ್ಲಿ ಪೂರ್ಣಪ್ರಮಾಣದ ಪಾಲುದಾರರಾಗಿ ಬದುಕಲು ಕಲಿಯಲು ಅವರಿಗಿದ್ದ ಹಳೆಯ ವಿಧಾನಗಳ ಮೇಲೆ ಒಂದು ಅತಿ ವಿಭಿನ್ನ ರೀತಿಯ ಜಗತ್ತು ಆಕ್ರಮಣವೆಸಗಿದೆ. ಇವರಿಗಾಗಿ ತಮಿಳುನಾಡು ಸರ್ಕಾರವು ಸ್ಥಾಪಿಸಿರುವ ಶಾಲೆಗಳಲ್ಲಿ ಆದಿವಾಸಿಗಳ ಮಕ್ಕಳು ದಿಕ್ಕುಗೆಟ್ಟು, ಒಂಟಿತನವನ್ನು ಅನುಭವಿಸುತ್ತಿದ್ದರು. ಅವರಲ್ಲಿ ಕೆಲವೇ ಕೆಲವರು ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದು ಪದವೀಧರರಾಗಿದ್ದಾರೆ ಎಂಬುದರಲ್ಲಿ ಅಚ್ಚರಿಯೇನೂ ಇಲ್ಲ.

ಆದಿವಾಸಿ ಮುನ್ನೇತ್ರ ಸಂಗಮ್‌ನ ರಮಾ ಶಾಸ್ತ್ರಿ ಹಾಗು ಬಿ. ರಾಮದಾಸ್ ಎಂಬ ಇಬ್ಬರು ಶಿಕ್ಷಣ ತಜ್ಞರು ಮೊದಲಿಗೆ ತಮ್ಮ ಮಕ್ಕಳಿಗಾಗಿ ಮತ್ತು ಬಳಿಕ ಸಂಗಮ್‌ನ ಕಾರ್ಯಕರ್ತರ ಮಕ್ಕಳಿಗಾಗಿ, ಒಂದು ಪರ್ಯಾಯ ಶಾಲೆಯನ್ನು ತೆರೆದರು. ಈಗ ಆ ಶಾಲೆಯ ಚುಕ್ಕಾಣಿಯನ್ನು ಆದಿವಾಸಿ ಮುನ್ನೇತ್ರ ಸಂಗಮ್ ವಹಿಸಿದ್ದು, ಅದು ಆದಿವಾಸಿಗಳಿಗೆ ಶಕ್ತಿ ಹಾಗು ಗೌರವಗಳನ್ನು ನೀಡುವ ಶಾಲಾ ಕಲಿಕೆಗೆ ಮಾದರಿಯಾಗುವಂತೆ ಈ ಶಾಲೆಯನ್ನು ಪೋಷಿಸುತ್ತಿದೆ. ಈ ಶಾಲೆಯು ಈಗ ಶಿಕ್ಷಕರಿಗೆ ತರಬೇತಿ ನೀಡುತ್ತಿರುವುದಲ್ಲದೆ, ಅಸ್ತಿತ್ವದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಆದಿವಾಸಿ ಮಕ್ಕಳ ವಿಷಯವಾಗಿ ನೆರವಾಗುತ್ತಿದ್ದು, ಆದಿವಾಸಿ ಮುನ್ನೇತ್ರ ಸಂಗಮ್‌ನ ಪರಿಶ್ರಮಗಳ ಕೇಂದ್ರಬಿಂದುವಾಗಿ ರೂಪುಗೊಂಡಿದೆ.

**ಸಾಂಕೇತಿಕ ಒಡನಾಟವಾದ**

'ಸಾಂಕೇತಿಕ ಒಡನಾಟವಾದ'ವು (Symbolic interactionism) ಮಾನವರೆಲ್ಲರೂ, ಬೆಳೆದು ವಿಕಾಸ ಹೊಂದುವುದು ಜಗತ್ತಿನೊಂದಿಗಿನ ತಮ್ಮ ಪರಸ್ಪರ ಒಡನಾಟದ ಮೂಲಕ ಎನ್ನುತ್ತದೆ. ನಮ್ಮ ತಾಯಿ–ತಂದೆಯರು, ಗೆಳೆಯರು, ಮತ್ತು ಇತರರ ಜೊತೆಗಿನ ಒಡನಾಟದಿಂದ ನಾವು ನಿಧಾನವಾಗಿ ಒಂದು 'ಸ್ವ' ಪ್ರಜ್ಞೆ ಅಥವಾ ಸ್ವಂತಿಕೆಯನ್ನು ರೂಪಿಸಿಕೊಳ್ಳುತ್ತೇವೆ. ನಮ್ಮೊಳಗೆ ಏನಾಗುತ್ತಿದೆ ಎನ್ನುವ ಬಗ್ಗೆ ಗಮನವಹಿಸುತ್ತಾ, ಆ ಕುರಿತು ಜಾಗರೂಕರಾಗುತ್ತೇವೆ. ಈ ಅರಿವು ಹುಟ್ಟಿನೊಂದಿಗೆ ಪೂರ್ಣರೂಪದಲ್ಲಿ ಬರುವುದೂ ಇಲ್ಲ, ತನ್ನಷ್ಟಕ್ಕೆ ಬೆಳೆಯುವುದೂ ಇಲ್ಲ. ಬದಲಿಗೆ, ಅದು ಬದಲಾಗುತ್ತಾ, ಸಾಮಾಜಿಕ ಒಡನಾಟಗಳ ಮೂಲಕ ರೂಪುಗೊಳ್ಳುತ್ತದೆ. ನಮ್ಮ ತಾಯಿ–ತಂದೆಯರ, ನೆರೆಹೊರೆಯವರ, ಗೆಳೆಯ–ಗೆಳತಿಯರ, ಶಿಕ್ಷಕರ ಮತ್ತು ಇತರರ ಜೊತೆಗೆ ಗೌರವಯುತವಾಗಿ ಒಡನಾಡುತ್ತಾ ಆ ಮೂಲಕ ಈ ಜಗತ್ತಿನಲ್ಲಿ ನಮ್ಮ ಸ್ಥಾನವನ್ನು ತಿಳಿಯಲು ತೊಡಗುತ್ತೇವೆ. ಈ ಅರಿವು ಸಾವಕಾಶವಾಗಿ ಅರಳುತ್ತದೆ. ಕುಟುಂಬವೊಂದರಲ್ಲಿ ಬೆಳೆಯುವ ಮಗುವು ನಿಧಾನವಾಗಿ ತನ್ನನ್ನು ತಾನೇ ಒಂದು 'ಹುಡುಗಿ' ಎಂದು ಕಾಣಲು ಪ್ರಾರಂಭಿಸುತ್ತದೆ. ತಾಯಿತಂದೆಯರು ಸ್ವಂತಿಕೆಯತ್ತ ಹೇಗೆ ನೋಡುತ್ತಾರೆ ಮತ್ತು ನಾಮಕರಣ ಮಾಡುತ್ತಾರೆ. ತನ್ನೊಡನೆ ಆಡಲು ಬರುವವರು ಬೊಂಬೆಗಳನ್ನು ಹಿಡಿದು ಬರುತ್ತಾರೆಯೇ ಹೊರತು, ಬಂದೂಕುಗಳನ್ನಲ್ಲ ಎಂಬುದರಿಂದ ಇದು ಹೊರಹೊಮ್ಮುತ್ತದೆ. ನಿಧಾನವಾಗಿ, ತಾನೊಬ್ಬಳು 'ಹುಡುಗಿ' ಎಂಬ ಸ್ವಪ್ರಜ್ಞೆಯು ಹೊರಹೊಮ್ಮುತ್ತದೆ. ಸ್ವಂತಿಕೆಯ ಈ ವ್ಯಾಖ್ಯಾನವು ಮುಂದೆ ಮಗುವಿನ ಇತರ ಒಡನಾಟಗಳನ್ನು, ನಾವು ಇತರರೊಂದಿಗೆ ಹೇಗೆ ವರ್ತಿಸಬೇಕು ಅಥವಾ ವರ್ತಿಸಬಾರದು ಎಂಬ ಆಯ್ಕೆಗಳನ್ನು ರೂಪಿಸುತ್ತದೆ. ನಮ್ಮ ಸ್ವಂತಿಕೆ ಹಾಗು ಗುರುತುಗಳು ಸ್ಥಿರವಲ್ಲ; ಅವು ಸಾಮಾಜಿಕ ಒಡನಾಟಗಳ ಮೂಲಕ ಹೊರಹೊಮ್ಮುತ್ತವೆ.

ವಿಶೇಷವಾಗಿ, ಸ್ವಂತಿಕೆಯು ಸನ್ನಿವೇಶಗಳಿಗೆ ನಾವು ನೀಡುವ ಅರ್ಥಗಳ ಮೂಲಕ ಹೊರಹೊಮ್ಮುತ್ತದೆ. ಉದಾಹರಣೆಗೆ, ಶಿಕ್ಷಕರೊಂದಿಗೆ ವಿದ್ಯಾರ್ಥಿಯ ಸಂಬಂಧವನ್ನೇ ತೆಗೆದುಕೊಳ್ಳೋಣ. ವಿದ್ಯಾರ್ಥಿಗಳಿಗಾಗಿ ನಾವು ಶಿಕ್ಷಕರು ನಮ್ಮನ್ನು ಹೇಗೆ ನೋಡುತ್ತಾರೆ ಎಂಬುದನ್ನು ಇಡಿಯಾಗಿ ಅರಿಯಲಾಗುವುದಿಲ್ಲ. ನಾವು ಅವರನ್ನು ಕೆಲವು ಸಂಕೇತಗಳ ಮೂಲಕ ಮಾತ್ರ ನೋಡುತ್ತೇವೆ, ಅಷ್ಟೇ. ಒಂದು ಆದಿವಾಸಿ ಮಗುವು ತಾನು ಅರ್ಥಮಾಡಿಕೊಳ್ಳಬಲ್ಲ ಕೆಲವು ಪರಿಚಿತ ಸಂಕೇತಗಳ ಮೂಲಕ ವಯಸ್ಕರು ತನ್ನೆಡೆಗೆ 'ವಾತ್ಸಲ್ಯ'ದ ನೋಟ ಬೀರುವುದನ್ನು ತಿಳಿಯಬಹುದು. ಈ ವಾತ್ಸಲ್ಯದ ಸಂಕೇತಗಳಲ್ಲಿ ಕೆಲವು ಪದಗಳು, ಹಾವ–ಭಾವಗಳು, ಸ್ಪರ್ಶ ಮತ್ತು ಬೇರಾವುದನ್ನಾದರೂ ಬಳಸಬಹುದು. ಬುಡಕಟ್ಟು ಜನಾಂಗದವರ ನಿಯಂತ್ರಣದಲ್ಲಿ ಇರದೆ ಇತರ ಜಾತಿಗಳ ಸಮಾಜದ ನಿಯಂತ್ರಣದಲ್ಲಿ ಇರುವ ಶಾಲೆಯಲ್ಲಿ ವಿದ್ಯಾರ್ಥಿಯು ಈ ಸಂಕೇತಗಳ ಅಭಾವವನ್ನು ಕಾಣಬಹುದು. ತನ್ನನ್ನು ಶಾಲೆಯಲ್ಲಿ 'ಪ್ರೀತ್ಯಾದರಗಳಿಂದ ಮೆಚ್ಚಿಕೊಳ್ಳು'ವುದಿಲ್ಲ ಎಂಬ ನಿರ್ಧಾರಕ್ಕೆ ಆ ಮಗುವು ಬರಬಹುದು. ಅಂತಹ ಮಗುವು ಶಾಲೆಗೆ ಹೋಗಲು ಹಿಂದೇಟು ಹಾಕಬಹುದು ಅಥವಾ ಶಾಲೆಯಲ್ಲಿರುವಾಗ ತನ್ನ ಪಾಡಿಗೆ ತಾನು ಇರಬಹುದು. ಈ ಪ್ರಕ್ರಿಯೆಯನ್ನು, ಸಿ. ಎಚ್. ಕೂಲೀ ಅವರು, "ದರ್ಶಿಸುವ ಕನ್ನಡಿಯ ಮೂಲಕ ಪ್ರಜ್ಞೆಯ ನಿರ್ಮಾಣವನ್ನು ರೂಪಿಸಿಕೊಳ್ಳುವ ಬಗೆ" ಎಂದು ಬಣ್ಣಿಸುತ್ತಾರೆ. ಇತರರು ನಮ್ಮನ್ನು ಹೇಗೆ ನೋಡುತ್ತಾರೆ ಎಂಬ ಕಲ್ಪನೆಯ ಮೇರೆಗೆ ನಾವು ನಮ್ಮ ಪ್ರತಿಕ್ರಿಯೆಗಳನ್ನು ರೂಢಿಸಿಕೊಳ್ಳುತ್ತೇವೆ. ನಮ್ಮ ಗ್ರಹಿಕೆಗಳು ಸಂಕೇತಗಳನ್ನು ಅವಲಂಬಿಸಿದ್ದು, ಈ ಸಂಕೇತಗಳನ್ನು ಕುರಿತು ನಡೆಯುವ ಪರ್ಯಾಲೋಚನೆಗಳ ಮೂಲಕ ನಾವು ನಮ್ಮ ಭಾವನೆಗಳನ್ನು ಬೆಳೆಸಿಕೊಳ್ಳುವುದು ಮತ್ತು ನಮ್ಮ ಭವಿಷ್ಯದ ವರ್ತನೆಯನ್ನು ಆರಿಸಿಕೊಳ್ಳುವುದನ್ನು ಮಾಡುತ್ತೇವೆ. ಸಂಕೇತಗಳೊಂದಿಗಿನ ಇಂತಹ ಒಡನಾಟಗಳ ಮೂಲಕ ನಮ್ಮ 'ಸ್ವ'ಪ್ರಜ್ಞೆ ಮತ್ತು ಅಸ್ಮಿತೆಯನ್ನು, ನಮ್ಮತನವನ್ನು ರೂಪಿಸಿ–ಕೊಳ್ಳುವುದನ್ನು ಎತ್ತಿತೋರುವ ಸೈದ್ಧಾಂತಿಕ ವಿಧಾನವನ್ನು 'ಸಾಂಕೇತಿಕ ಒಡನಾಟವಾದ' ಎನ್ನುತ್ತೇವೆ.

ಸಾಂಕೇತಿಕ ಒಡನಾಟವಾದದ ಪ್ರತಿಪಾದಕರ ಪ್ರಕಾರ ಒಳ್ಳೆಯ ಶಿಕ್ಷಕನಾಗಲು ಬೇಕಿರುವ, ಕಲಿಕೆಯ ಒಂದು ಮುಖ್ಯ ಲಕ್ಷಣವೆಂದರೆ, ವಿದ್ಯಾರ್ಥಿಗಳಿಗೆ ಪರಿಚಯವಿರುವ ರೀತಿಯಲ್ಲಿ ಮತ್ತು ಅವರು ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತಹ ಸಂಕೇತಗಳನ್ನು ಬಳಸಲು ಕಲಿಯುವುದೇ ಆಗಿದೆ. ಉದಾಹರಣೆಗೆ, ನನ್ನ ವಿದ್ಯಾರ್ಥಿಗಳಿಗೆ ಆ ದಿನದ ತರಗತಿ ಹಾಗು ವಿಷಯಗಳು ಇತರ ಎಲ್ಲದರ ಗ್ರಹಿಕೆಗೆ ಅತ್ಯಗತ್ಯವೆಂದು ನಾನು ತಿಳಿಸಬೇಕೆಂದರೆ, ಅದಕ್ಕಾಗಿ ಸೂಕ್ತ ಸಂಕೇತಗಳನ್ನು, ಅಂದರೆ ಹಾವಭಾವಗಳು, ಧ್ವನಿಯ ಏರಿಳಿತ, ಪದಗಳು, ಕಪ್ಪುಹಲಗೆಯ ಬಳಕೆ ಇತ್ಯಾದಿಯನ್ನು ಕಂಡುಕೊಳ್ಳುವ ಅಗತ್ಯವಿದೆ. ಜೊತೆಗೆ, ಇವೆಲ್ಲವನ್ನೂ ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಬಳಸುವುದೂ ಸೇರಿದೆ. ಇದಕ್ಕಾಗಿ, ನಾನು ಕೂಡ, ಓರ್ವ ಶಿಕ್ಷಕನಾಗಿ, ಅವರ ಸಂಕೇತಗಳನ್ನು ಅರಿತಿರಬೇಕಾಗುತ್ತದೆ. ನಾನು ವಿಷಯವನ್ನು ವಿವರಿಸುವ ರೀತಿಗೆ ವಿದ್ಯಾರ್ಥಿಗಳು ಸ್ಪಂದಿಸದೇ ಹೋಗಬಹುದು; ಆಗ ಅವರ ಗಮನ ನನ್ನ ಕಡೆಗೆ ಇರುವುದಿಲ್ಲ. ಆಗ ನಾನು ವಿದ್ಯಾರ್ಥಿಗಳನ್ನು ಮಂದ ಬುದ್ಧಿಯವರೆಂದೂ

ಮತ್ತು ಬುದ್ಧಿಹೀನರೆಂದೂ ಜರಿಯಬಹುದು. ಆದರೆ, ನಿಜವಾಗಿಯೂ, ಇಲ್ಲಿ ಸೋಲಿಗೆ ಕಾರಣ ನಾನು ಬಳಸಿದ ಸಂಕೇತಗಳಲ್ಲಿ ವೈಫಲ್ಯವಿತ್ತು ಎನ್ನುವುದಾಗಿದೆ.

ವಿದ್ಯಾರ್ಥಿಗಳು ಯಾವ ಸಂಕೇತಗಳನ್ನು ಅರ್ಥಮಾಡಿ–ಕೊಳ್ಳುತ್ತಾರೆ ಎಂಬುದನ್ನು ಗುರುತಿಸಲು ಆರಂಭಿಸಿ, ಅವುಗಳಲ್ಲಿ ಅತಿ ಪರಿಣಾಮಕಾರಿ ಸಂಕೇತಗಳನ್ನು ಆರಿಸಿಕೊಂಡು ಬಳಸುವುದರಲ್ಲಿ ಚೆನ್ನಾಗಿ ಪಾಠ ಮಾಡುವುದನ್ನು ಕಲಿಯುವುದರ ಬಹುಪಾಲು ಅಡಗಿದೆ. ವಿದ್ಯಾರ್ಥಿಗಳು ನನ್ನ ತರಗತಿಯಲ್ಲಿ ಆಸಕ್ತಿ ತೋರಿ ಸ್ಪಂದಿಸಲು ತೊಡಗಿದಾಗ (ಅಥವಾ ಯಾವ ಸಂಕೇತಗಳು ಆಸಕ್ತಿಯನ್ನು ಪ್ರತಿನಿಧಿಸುತ್ತವೆ ಎಂದು ನಾನು ಗುರುತಿಸಿದಾಗ) ಅದು ನನ್ನ ಸ್ವಂತಿಕೆಯನ್ನು ರೂಪಿಸುತ್ತದೆ. ಆಗ ನಾನು ಹೆಮ್ಮೆಯಿಂದ ನನ್ನನ್ನು ಓರ್ವ ದಕ್ಷ ಶಿಕ್ಷಕನಾಗಿ ನೋಡಲು ತೊಡಗುತ್ತೇನೆ. ನಾವು ಸದಾ ಸಂಕೇತಗಳ ಮೂಲಕ ಒಡನಾಡುತ್ತಿದ್ದು, ಈ ಪ್ರಕ್ರಿಯೆಯ ಅಧ್ಯಯನವು ಕಲಿಕೆ ಮತ್ತು ಬೋಧನೆಗಳ ವಿಚಾರವಾಗಿ ಮಹತ್ವದ ಒಳನೋಟಗಳನ್ನು ನೀಡುತ್ತದೆ.

**ಸಾಂಕೇತಿಕ ಒಡನಾಟಗಳಲ್ಲಿ ಸ್ವಾಯತ್ತತೆ**

ಅಸ್ಮಿತೆಯು ಸಾಮಾಜಿಕ ಒಡನಾಟಗಳಿಂದ ರೂಪುಗೊಳ್ಳುತ್ತದೆ–ಯಾದರೂ, ಅದು ಯಾಂತ್ರಿಕವಾಗಿ ರೂಪುಗೊಳ್ಳುವುದಿಲ್ಲ. ಇತರರು ನಮ್ಮನ್ನು ಹೇಗೆ ನೋಡುತ್ತಾರೆ ಎಂಬುದನ್ನು ನಾವು ಎಲ್ಲಾ ಸಮಯದಲ್ಲೂ ಒಪ್ಪಿಕೊಳ್ಳುವುದಿಲ್ಲ. ಪ್ರಭಾವಿ ಜಾತಿಯ ಶಿಕ್ಷಕನೊಬ್ಬ ಆದಿವಾಸಿ ಮಗುವನ್ನು ತಿರಸ್ಕಾರದಿಂದಲೂ, ಪ್ರಯೋಜನಕ್ಕೆ ಬಾರದ ವಿದ್ಯಾರ್ಥಿಯೆಂದೂ ಕಂಡು, ಮಗು ಶಾಲೆಗೆ ಸೇರದೆ ಇರಬೇಕಿತ್ತು ಎಂಬ ಭಾವವನ್ನು ವ್ಯಕ್ತಪಡಿಸುವಂತೆ ತೋರಿದರೆ, ಆ ಭಾವದ ಹಿಂದಿನ ಅರ್ಥಗಳನ್ನು ಮಗು ಗ್ರಹಿಸುವ ಸಾಧ್ಯತೆ ಇರುತ್ತದೆ. ಆಗ, ಆ ಮಗುವು ಈ ಅರ್ಥಗಳನ್ನು ತಾನು ಹೇಗೆ ಭಾವಿಸಬೇಕು ಎಂಬುದನ್ನು ತಿಳಿಯಲು ಪ್ರಯತ್ನಿಸುತ್ತದೆ. ಮಗುವು ತನ್ನ ಬಗ್ಗೆಯೇ ಈ ರೀತಿ ಯೋಚಿಸತೊಡಗಬಹುದು: "ನಾನೊಬ್ಬ ಅಯೋಗ್ಯ, ತಪ್ಪು ಜಾಗಕ್ಕೆ ಬಂದಿದ್ದೇನೆ" ಇತ್ಯಾದಿ; ಅಥವಾ, "ನಾನೂ ಇತರರಂತೆಯೇ ಆಗಬೇಕು, ಶಿಕ್ಷಕರ ಮೆಚ್ಚುಗೆ ಗಳಿಸಲು ಪ್ರಯತ್ನಿಸಬೇಕು" ಎಂಬ ಬೇರೆಯೇ ಒಂದು ವ್ಯಾಖ್ಯಾನವನ್ನು ಕಟ್ಟಿಕೊಳ್ಳಬಹುದು. ಅಥವಾ, "ನನಗಿಲ್ಲಿ ಅನ್ಯಾಯವಾಗುತ್ತಿದೆ; ಬೆಳೆಯಲು ಬೇಕಿರುವ ಅವಕಾಶವನ್ನು ಶಿಕ್ಷಕರು ಅಲ್ಲಗಳೆಯುತ್ತಿದ್ದಾರೆ" ಎಂಬ ಇನ್ನೊಂದು ಬಗೆಯ ವ್ಯಾಖ್ಯಾನದ ರೂಪ ತಳೆಯಬಹುದು.

ನಮ್ಮನ್ನು ಉಳಿದವರು ಹೇಗೆ ಕಾಣುತ್ತಾರೆ ಎಂಬುದನ್ನು ಕಂಡ ಬಳಿಕ ನಮ್ಮಲ್ಲೇ ಹಲವು ಆಂತರಿಕ ಸಂಭಾಷಣೆಗಳು ನಡೆಯುತ್ತವೆ ಎನ್ನುತ್ತಾರೆ ಸಾಂಕೇತಿಕ ಒಡನಾಟವಾದದ ಪ್ರತಿಪಾದಕರು. ನಾವು ವಿಭಿನ್ನ ಪ್ರತಿಕ್ರಿಯೆಗಳನ್ನು ಗುರುತಿಸುವುದಾಗಲೀ, ಸೃಷ್ಟಿಸುವುದಾಗಲೀ, ಹಾಗು ಅವುಗಳ ನಡುವೆ ಆಯ್ಕೆ ಮಾಡುವುದಾಗಲೀ ಈ ಆಂತರಿಕ ಸಂಭಾಷಣೆಗಳಲ್ಲೇ. ಸಾಂಕೇತಿಕ ಒಡನಾಟವಾದವು ನಾವು ಈ ಆಂತರಿಕ ಸಂಭಾಷಣೆಗಳಿಗೆ ಹಾಗು ಅವು ತೆರೆದುಕೊಳ್ಳುವ ರೀತಿಗೆ ಗಮನ ನೀಡುವಂತೆ ನಮ್ಮನ್ನು ಪ್ರಚೋದಿಸುತ್ತದೆ. ಮೊದಮೊದಲು, ಅದು ಕೇವಲ ನಮ್ಮ ಆಂತರಿಕ ಜೀವನದೆಡೆಗೆ ನೋಟ ಬೀರುವಂತೆ ಇದ್ದರೂ, ಇಂದು ನಮ್ಮ ಆಂತರಿಕ ಜೀವನವು, ಸಾಮಾಜಿಕ ಬದುಕಿನ ಅಗಾಧ ಸಮಸ್ಯೆಗಳಿಗೂ, ಹೋರಾಟಗಳಿಗೂ ಬೆಸೆದು–ಕೊಂಡಿರುವುದನ್ನು ತೋರಿಸಲು ಈ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲಾಗಿದೆ. ನಮ್ಮ ಆಂತರಿಕ ಸಂಭಾಷಣೆಗಳು ನಮ್ಮನ್ನು ನಾವೇ ಒಂದು ಮೂಕ ಹೆಂಗಸು ಅಥವಾ ಓರ್ವ ಆದಿವಾಸಿಯ ಪಡಿಯಚ್ಚಿನಂತೆ ನೋಡುವುದನ್ನು ಪ್ರಶ್ನಿಸಲು ನಮ್ಮನ್ನು ಪ್ರಚೋದಿಸುತ್ತವೆ.

**ದಿಟ್ಟ ಅಸ್ಮಿತೆಯ ನಿರ್ಮಾಣ**

**ವಿದ್ಯೋದಯ ಶಾಲೆ**

ಹೊರಗಿನ ಸಮಾಜದ ಸಂಘರ್ಷಗಳು ತರಗತಿಗಳಲ್ಲಿ ಮತ್ತು ನಮ್ಮ ಆಂತರಿಕ ಸಂಭಾಷಣೆಗಳಲ್ಲಿ ಹೇಗೆ ಪ್ರತಿಧ್ವನಿಸುತ್ತವೆ ಎಂಬುದನ್ನು ಶಾಲಾ ಶಿಕ್ಷಣದಲ್ಲಿ ನಿರತವಾಗಿರುವ ಆದಿವಾಸಿ ಮುನ್ನೇತ್ರ ಸಂಗಮ್‌ನ ಅನುಭವವು ತೋರಿಸುತ್ತದೆ. ಆದಿವಾಸಿ ಮುನ್ನೇತ್ರ ಸಂಗಮ್‌ನ ವಾದವು ಆದಿವಾಸಿಗಳು ಸಭ್ಯ ಮತ್ತು ಉತ್ತಮ ಜನರಾಗಿದ್ದಾರೆ ಎಂಬುದಾಗಿತ್ತು. ಅವರನ್ನು ಶೋಷಿಸಿ, ಅವರ ಸಂಪತ್ತನ್ನು ದೋಚಿದ ಶಕ್ತಿಶಾಲಿ ವರ್ಗಗಳಿಂದ ಅವರು ಅನ್ಯಾಯಕ್ಕೆ ಒಳಗಾಗಿದ್ದಾರೆ. ಹಲವು ಪ್ರದೇಶಗಳಲ್ಲಿ ಅವರು ಆದಿವಾಸಿ ತಂಡಗಳನ್ನು ರಚಿಸಿಕೊಂಡು ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಲು ಮತ್ತು ತಮಗೆ ಸಲ್ಲಬೇಕಿರುವ ನ್ಯಾಯಕ್ಕಾಗಿ ಹೋರಾಡಲು ಶ್ರಮಿಸುತ್ತಿದ್ದಾರೆ. ಆದಿವಾಸಿ ಮುನ್ನೇತ್ರ ಸಂಗಮ್ ಆದಿವಾಸಿ ಸ್ವಾಭಿಮಾನದ ಪುನರ್‌ನಿರ್ಮಾಣಕ್ಕಾಗಿ ಮತ್ತು ಆದಿವಾಸಿಗಳು ತಮ್ಮ ಪರಿಸ್ಥಿತಿಗಳನ್ನು ಸುಧಾರಿಸಿಕೊಳ್ಳುವ ದಿಸೆಯಲ್ಲಿ ಅವರನ್ನು ಕ್ರಿಯಾಶೀಲರನ್ನಾಗಿ ಮಾಡಲು ಶ್ರಮಿಸಿದೆ.

ಈ ಪ್ರಕ್ರಿಯೆಯು, 'ವಿದ್ಯೋದಯ ಶಾಲೆ' ಎಂದು ಕರೆಯಲ್ಪಡುವ ಸಂಗಮ್‌ನ ಶಾಲೆಯ ಸ್ಥಾಪನೆಗೆ ಕಾರಣವಾದಂತೆಯೇ ಸ್ಥಳೀಯ ಶಾಲೆಗಳ ವ್ಯವಹಾರಗಳಲ್ಲಿ ಹಾಗು ಶಿಕ್ಷಣ ನಿರ್ವಹಣೆಯ ವಿಚಾರದಲ್ಲಿ ಆದಿವಾಸಿ ಮುನ್ನೇತ್ರ ಸಂಗಮ್ ಎಲ್ಲ ರೀತಿಯಲ್ಲಿ ತೊಡಗಿಸಿಕೊಳ್ಳಲು ಕಾರಣವಾಯಿತು. ನೀಲಗಿರಿ ಬೆಟ್ಟಗಳ ಆದಿವಾಸಿ ವಿದ್ಯಾರ್ಥಿಗಳ ಆಂತರಿಕ ಸಂಭಾಷಣೆಗಳಿಗೆ ಇದರಿಂದ ಒಂದು ಶಕ್ತಿಶಾಲಿ ನಿರೂಪಣೆಯು ಸೇರ್ಪಡೆಯಾಯಿತು. ಇದು ಅವರಿಗೆ ಇತರ ಪ್ರಭಾವಿ ಸಮುದಾಯಗಳ ಶಿಕ್ಷಕರು ತಮ್ಮನ್ನು ಕಾಣುವ ರೀತಿಯನ್ನು ನಿಭಾಯಿಸುವ ವಿಧಾನವನ್ನು ನೀಡಿತು.

**ಅಸ್ಮಿತೆಯ ಪುನರ್‌ನಿರ್ಮಾಣ**

ಆದಿವಾಸಿ ಅಸ್ಮಿತೆಯ ಪುನರ್ ನಿರ್ಮಾಣಕ್ಕಾಗಿ ವಿದ್ಯೋದಯ ಶಾಲೆಯು ಪ್ರಜ್ಞಾಪೂರ್ವಕವಾಗಿ ತನ್ನನ್ನು ತಾನು ಆದಿವಾಸಿ ಶಿಕ್ಷಕರ ಸುತ್ತಲೂ ಕಟ್ಟಿಕೊಂಡಿತು. ಹಾಗೆಂದ ಮಾತ್ರಕ್ಕೆ ಇತರ ಶಿಕ್ಷಕರು ಅಲ್ಲಿ ಪಾಠ ಮಾಡುತ್ತಿರಲಿಲ್ಲ ಎಂದೇನೂ ಅಲ್ಲ. ಮೊದಮೊದಲು, ವಿದ್ಯೋದಯ ಶಾಲೆಯಲ್ಲಿ ಶಿಕ್ಷಕರಾಗಿ ಸೇರಲು ಆದಿವಾಸಿ ಪದವೀಧರರ ಕೊರತೆಯಿತ್ತು. ಆದ್ದರಿಂದ ಶಾಲೆಯು ತನ್ನ ಶಿಕ್ಷಕರಿಗೆ ತರಬೇತಿ ನೀಡುವ ತನ್ನದೇ ಆದ ಒಂದು ಪ್ರಕ್ರಿಯೆಯನ್ನು ರೂಪಿಸಿಕೊಂಡಿತು. ಶಿಕ್ಷಕರು ಶಾಲಾ ಪಠ್ಯಪುಸ್ತಕಗಳ ಅಧ್ಯಯನದಲ್ಲಿ ತೊಡಗಿ ಕರಗತ ಮಾಡಿಕೊಂಡರು. ಬೋಧನಾ ವಿಧಾನದ ಕಲೆ ಮತ್ತು ಶಿಕ್ಷಣಶಾಸ್ತ್ರದ ಬಗ್ಗೆ ಅರಿತುಕೊಂಡರು. ಆದಿವಾಸಿ ಜನಾಂಗದ ನಾಯಕರು ಹಾಗು ಹಿರಿಯರು ಶಿಕ್ಷಕರೊಂದಿಗೆ ತಮ್ಮ ಹೋರಾಟದ ಬಗ್ಗೆ ಹಾಗು ಅದರಲ್ಲಿ ಶಿಕ್ಷಣದ ಪಾತ್ರವೇನು ಎಂಬುದನ್ನು ತಿಳಿಸಿಕೊಟ್ಟರು. ಶಾಲೆಗಳ ಮೂಲಕ ಆದಿವಾಸಿ ಸಮುದಾಯದ ಮಕ್ಕಳನ್ನು ಬೇರೊಂದು ಸಂಸ್ಕೃತಿಯು ನುಂಗಿಹಾಕಬಹುದಾದ ಅಪಾಯವನ್ನು ಶಿಕ್ಷಕರಿಗೆ ಮನದಟ್ಟು ಮಾಡಿಸಲಾಯಿತು. ಸಾಂಪ್ರದಾಯಿಕ ಶಾಲೆಗಳಲ್ಲಿ ಒಳ್ಳೆಯ ಹೆಸರು ಪಡೆಯುವ ಆದಿವಾಸಿ ಮಕ್ಕಳು ತಮ್ಮನ್ನು, ತಮ್ಮ ಸಂಬಂಧಿಕರನ್ನು,

ಗೆಳೆಯ–ಗೆಳತಿಯರನ್ನು ನಿಕೃಷ್ಟವಾಗಿ ಕಾಣುವಂತಾಗುವ ಅಪಾಯವೂ ಇತ್ತು. ಅವರು ತಮ್ಮ ಮಕ್ಕಳಿಗೆ ಶಾಲೆಯಲ್ಲಿ ದೊರಕಿಸಬೇಕಾದುದು ಈ ರೀತಿಯ ಶಿಕ್ಷಣವಲ್ಲವೆಂಬ ವಿಚಾರವನ್ನು ಒತ್ತಿ ಹೇಳಿದರು.

ವಿದ್ಯೋದಯ ಶಾಲೆಯು ತನ್ನ ಆವರಣದಲ್ಲಿ ಆದಿವಾಸಿ ಭಾಷೆಗಳಲ್ಲಿ ಮಾತನಾಡಲು ಮಕ್ಕಳಿಗೆ ಮುಕ್ತವಾಗಿ ಅನುಮತಿ ನೀಡಿತು. ಆ ಪ್ರದೇಶದ ಇತರ ಖಾಸಗಿ ಹಾಗು ಸರ್ಕಾರಿ ಶಾಲೆಗಳು, ಆದಿವಾಸಿ ಮಕ್ಕಳ ಭಾಷೆಯನ್ನು ಬದಿಗೊತ್ತಿ, ಮಕ್ಕಳು ಶಾಲಾ–ಆವರಣದಲ್ಲಿ ತಮಿಳಿನಲ್ಲಿಯೇ ಮಾತನಾಡುವಂತೆ ತಾಕೀತು ಮಾಡುತ್ತಿದ್ದವು. ವಿದ್ಯೋದಯ ಶಾಲೆಯ ಶಿಕ್ಷಕಿಯೊಬ್ಬರು, ಆ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿದಾಗ, ಅದೇ ಮೊದಲ ಬಾರಿಗೆ ಶಾಲೆಯಲ್ಲಿ ತನ್ನ ಆಡುಭಾಷೆಯಲ್ಲಿ ಮಕ್ಕಳು ಮಾತನಾಡುತ್ತಿರುವುದನ್ನು ಕೇಳಿದ್ದಾಗಿ ಹೇಳಿದರು. ಆಕೆಗೆ ಅದೊಂದು ವಿಚಿತ್ರವೂ, ನೂತನವೂ ಆದ ಅನುಭವವಾಗಿತ್ತು. ಶಾಲೆಯ ಗೋಡೆಗಳ ನಡುವೆ ಆಕೆಯ ಭಾಷೆಗೆ ಎಡೆಯಿಲ್ಲದಂತೆ ಇದ್ದರೂ, ಅದು ಅಲ್ಲಿ ನ್ಯಾಯ, ಔಚಿತ್ಯಪೂರ್ಣವೂ ಆಗಿ ತೋರಿತ್ತು. ಈ ಶಾಲೆಯಲ್ಲಿ ಮಕ್ಕಳು ಪ್ರವೇಶಿಸುತ್ತಿದ್ದಂತೆಯೇ ತಮ್ಮ ಮನೆಯ ಆಡುಭಾಷೆಯ ಬಗ್ಗೆ ಮುಜುಗರಪಡುವಂತಹ ಸಂದೇಶವನ್ನು ರವಾನಿಸುವ ವಾತಾವರಣ ಎದುರಾಗುತ್ತಿರಲಿಲ್ಲ. ತಮಿಳು ಅಧಿಕೃತ ಬೋಧನಾ ಮಾಧ್ಯಮವಾಗಿದ್ದು, ಅದನ್ನು ಇನ್ನೂ ಕಲಿಸುತ್ತಿದ್ದರೂ, ಹಂತ–ಹಂತವಾಗಿ ಮಕ್ಕಳಿಗೆ ಪರಿಚಯಿಸಲಾಗುತ್ತಿತ್ತು. ಉದಾಹರಣೆಗೆ, ವಿವಿಧ ಆದಿವಾಸಿ ಭಾಷೆಗಳಲ್ಲಿ ಕೆಂಪು ಬಣ್ಣಕ್ಕೆ ಬೇರೆ–ಬೇರೆ ಪದಗಳಿರುವ ಬಗ್ಗೆ ಹಾಗು ತಮಿಳಿನಲ್ಲಿ ಅದನ್ನು ಸೂಚಿಸುವ ಪದದ ಬಗ್ಗೆ ಶಿಕ್ಷಕರು ಮಕ್ಕಳೊಡನೆ ಚರ್ಚಿಸುತ್ತಿದ್ದರು.

### ‘ಸ್ವ’ ಪ್ರಜ್ಞೆಯೊಡನೆ ಸಂಬಂಧ

ಸಾಂಕೇತಿಕ ಒಡನಾಟವಾದಿಗಳ ಪ್ರಕಾರ ಈ ಶಾಲೆಯಲ್ಲಿ ಮಕ್ಕಳು ತಮ್ಮ ಸ್ವಪ್ರಜ್ಞೆಯನ್ನು ಕಟ್ಟಿಕೊಳ್ಳುತ್ತಿದ್ದು, ಅದನ್ನವರು ಅಡಗಿಸಿಟ್ಟು–ಕೊಳ್ಳಬೇಕಾದ ಮತ್ತು ಮುಚ್ಚಿಕೊಳ್ಳಬೇಕಾದ, ರಹಸ್ಯದಂತೆ ಕಾಣುತ್ತಿರಲಿಲ್ಲ. ಬದಲಿಗೆ, ಅವರು ತಮ್ಮ ಸ್ವಪ್ರಜ್ಞೆಯ ವಿವಿಧ ಭಾಗಗಳೊಂದಿಗೆ ಸಂಭಾಷಣೆಗಳನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿದ್ದರು. ವಿವಿಧ ಭಾಷೆಗಳ ನಡುವಿನ ಅಧಿಕಾರದ ಸಂಬಂಧವನ್ನೇನೂ ಅವರು ಕಡೆಗಣಿಸಿರಲಿಲ್ಲ. ಮಕ್ಕಳು ಮತ್ತು ಶಿಕ್ಷಕರಿಬ್ಬರೂ ಈ ವ್ಯತ್ಯಾಸಗಳನ್ನು ಅರಿತಿದ್ದರು, ಹಾಗೆಯೇ ತಮಿಳು ಭಾಷೆಯ ಶಕ್ತಿಯನ್ನೂ ತಿಳಿದಿದ್ದರು. ಮಕ್ಕಳು ಶಾಲೆಯಲ್ಲಿ ಇಂಗ್ಲೀಷನ್ನೂ ಕಲಿಯುತ್ತಿದ್ದು, ಅದನ್ನು ಕೂಡ ಚೆನ್ನಾಗಿಯೇ ಕಲಿಸಲಾಗುತ್ತಿತ್ತು. ಇಂಗ್ಲಿಷಿನಲ್ಲಿ ಮಾತನಾಡಬಲ್ಲ ಸಾಮರ್ಥ್ಯದ ವಿಚಾರದಲ್ಲಿ ಈ ಮಕ್ಕಳು ನಿಜವಾಗಿಯೂ ಮೇಲಿದ್ದರು. ಈ ಮಕ್ಕಳ ಸ್ವಂತ ಅಸ್ಮಿತೆ, ತಮಿಳು ಅಸ್ಮಿತೆ ಹಾಗು ಇಂಗ್ಲಿಷ್ ಮಾತನಾಡಬಲ್ಲ ಅಸ್ಮಿತೆಗಳ ನಡುವೆ ಸಂಬಂಧವೊಂದು ನಿರ್ಮಾಣವಾಗುತ್ತಿತ್ತು. ಇದೊಂದು ಹೊಸ ಬಗೆಯ ಅಸ್ಮಿತೆಯಾಗಿತ್ತು. ಸಂಕೋಚ, ಮುಜುಗರಗಳಿಂದ ತಮಿಳಿನಲ್ಲಿ ಮಾತನಾಡುವ, ಆದರೆ, ಗುಟ್ಟಾಗಿ ತನ್ನ ಗೆಳೆಯ–ಗೆಳತಿಯರೊಂದಿಗೆ, ಕುಟುಂಬದ ಸದಸ್ಯರೊಂದಿಗೆ ಬೇರೊಂದು ಭಾಷೆಯಲ್ಲಿ ಉತ್ಸಾಹದಿಂದ ಮಾತನಾಡುತ್ತಿದ್ದ ಹಳೆಯ ಅಸ್ಮಿತೆಗಿಂತ ಇದು ವಿಭಿನ್ನವಾಗಿತ್ತು. ಬದಲಿಗೆ, ಮಕ್ಕಳು ಒಂದು ಕ್ರಿಯಾತ್ಮಕವೂ, ಆತ್ಮವಿಶ್ವಾಸವುಳ್ಳದ್ದೂ ಆದ ಸ್ವಪ್ರಜ್ಞೆಯನ್ನು ನಿರ್ಮಿಸಿಕೊಳ್ಳುವತ್ತ ಭರದಿಂದ ಮುಂದೆ ಸಾಗುತ್ತಿದ್ದರು.

ಸಾಂಪ್ರದಾಯಿಕ ಶಾಲಾಶಿಕ್ಷಣವು ಕೀಳರಿಮೆ ಮತ್ತು ಸಾಮರ್ಥ್ಯ ಹೀನತೆಯ ಅಸ್ಮಿತೆಯನ್ನು ಹುಟ್ಟುಹಾಕಿದ್ದ ಪರಿಸ್ಥಿತಿಯಲ್ಲಿ ಆದಿವಾಸಿ ಮುನ್ನೇಟ್ರ ಸಂಗಮ್ ಕೈಗೊಂಡ ಶೈಕ್ಷಣಿಕ ಕಾರ್ಯವು ಅದನ್ನು ಸರಿಪಡಿಸುವುದರಲ್ಲಿ ನಿರತವಾಗಿದೆ. ವಿದ್ಯೋದಯ ಶಾಲೆ ಹಾಗು ಆದಿವಾಸಿ ಮುನ್ನೇಟ್ರ ಸಂಗಮ್‌ನ ಚಟುವಟಿಕೆಗಳು ಯಾವ ರೀತಿ ಮಕ್ಕಳ ಅಸ್ಮಿತೆಯ ಪರಿಕಲ್ಪನೆಯಲ್ಲಿ ಮಾರ್ಪಾಡು ತರಲು ನೆರವಾಗುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಂಕೇತಿಕ ಒಡನಾಟವಾದವು ನಮಗೆ ದಾರಿತೋರುತ್ತದೆ. ಇಲ್ಲಿ ಬೇರೊಂದು ರೀತಿಯ ಆಂತರಿಕ ಸಂಭಾಷಣೆಗಳನ್ನು ಸಾಧ್ಯವಾಗಿಸಲಾಗಿದೆ. ಇವು ಸಾವಕಾಶವಾಗಿ ಮಕ್ಕಳ ಕ್ರಿಯೆಗಳಿಗೆ ಬಲತುಂಬುತ್ತಿದ್ದು, ಅವರಿಗೆ ಅಸ್ಮಿತೆಯ ಹೊಸ ಪ್ರಜ್ಞೆಯೊಂದನ್ನು ರೂಢಿಸಿಕೊಳ್ಳಲು ಹಾಗು ಪ್ರಸ್ತುತ ಜಗತ್ತಿನಲ್ಲಿ ಒಂದು ನೂತನವೂ, ಗೌರವಾನ್ವಿತವೂ ಆದ ಸ್ಥಾನವನ್ನು ಕಲ್ಪಿಸಿಕೊಳ್ಳಲು ಅವರಿಗೆ ನೆರವು ನೀಡುತ್ತಿದೆ.

**ಕೃತಜ್ಞತೆ**
ಈ ಲೇಖನ ಬರೆಯಲು ನೀಡಿದ ಬೆಂಬಲಕ್ಕಾಗಿ ರಮಾ ಶಾಸ್ತ್ರಿ ಬಿ. ರಾಮದಾಸ್ ಮತ್ತು ವಿದ್ಯೋದಯ ಶಾಲೆಯ ಎಲ್ಲಾ ಶಿಕ್ಷಕರಿಗೂ ಮತ್ತು ಆದಿವಾಸಿ ಮುನ್ನೇಟ್ರ ಸಂಗಮ್‌ನ ಎಲ್ಲಾ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ.

**ಆಕರಗಳು ಮತ್ತು ಹೆಚ್ಚಿನ ಓದಿಗಾಗಿ**

Blackledge, David A., and Barry Dennis Hunt. “Micro-Interpretive Approaches: An Introduction.” In Sociological Interpretations of Education, 233–48. Taylor & Francis, 1985.

Madan, Amman, Rama Sastry, and B. Ramdas. “Social Movements and Educational Change: A Case Study of the Adivasi Munnetra Sangam.” Economic & Political Weekly 54, no. 5 (February 2, 2019): 45–52.

Reay, Diane. “Finding or Losing Yourself? Working-Class Relationships to Education.” In The Routledge Falmer Reader in Sociology of Education, edited by Stephen Ball. London and New York: Routledge Falmer, 2004.



**ಅಮ್ಮನ್ ಮದನ್** ಅವರು ಚಂಡೀಘಡದ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರವನ್ನೂ, ನವದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರವನ್ನೂ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಿದ್ದು, ಶಿಕ್ಷಣ ಹಾಗು ಸಾಮಾಜಿಕ ಅಸಮಾನತೆಯನ್ನು ಕುರಿತಾದ ಕೃತಿ ರಚನೆಯಲ್ಲಿ ತೊಡಗಿದ್ದಾರೆ. 'ಶಿಕ್ಷಣ ಹಾಗು ಆಧುನಿಕತೆ' ಎಂಬ ಅವರ ಇತ್ತೀಚಿನ ಪುಸ್ತಕವನ್ನು ಏಕಲವ್ಯ ಪ್ರಕಟಿಸಿದೆ. ಇವರನ್ನು ಸಂಪರ್ಕಿಸಬಹುದಾದ ಇ–ಮೇಲ್ ವಿಳಾಸ: amman.madan@apu.edu.in

ಅನುವಾದ: **ಕುಶಾಲ್ ಬಿ ಎಸ್** । ಪರಿಶೀಲನೆ: **ಲತಾ ಕೆ ಸಿ**

ಮಕ್ಕಳ ಮನಸ್ಸುಗಳಲ್ಲಿ ಅದರಲ್ಲೂ ವಿಶೇಷವಾಗಿ ಆರಂಭಿಕ ಪ್ರಾಥಮಿಕ ತರಗತಿಗಳಲ್ಲಿನ ಮಕ್ಕಳಲ್ಲಿ ಬಹಳ ಕುತೂಹಲವಿರುತ್ತದೆ. ಅವರಲ್ಲಿ ಪ್ರಯೋಗದ ಕಿಡಿಯನ್ನು ಅಥವಾ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿ ಉಳಿಸಿಕೊಂಡು ಹೋಗುವುದು ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ. ಶಿಕ್ಷಕರು ತರಗತಿಯಲ್ಲಿ ಬಳಸುವ ಭಾಗವಹಿಸುವಿಕೆಯ ವಿಧಾನಗಳು ಮತ್ತು ಸಮೃದ್ಧ ಶೈಲಿಯಲ್ಲಿ ವಿಷಯವನ್ನು ಪ್ರಸ್ತುತಪಡಿಸುವುದರಿಂದ, ಇವೆಲ್ಲಾ ಮಕ್ಕಳ ತಿಳುವಳಿಕೆ ಹಾಗೂ ಗ್ರಹಿಕೆಯ ಮೇಲೆ ಮಾಂತ್ರಿಕ ಪ್ರಭಾವವನ್ನು ಬೀರುತ್ತದೆ. ಯಾವುದೇ ರೀತಿಯ ಭಯವಿಲ್ಲದೆ ವಿಷಯದಲ್ಲಿ ಮಕ್ಕಳು ತೊಡಗುವುದು ಮತ್ತು ವಿಷಯವನ್ನು ಇಷ್ಟಪಡುವುದು ಕಲಿಕೆಯ ನಿರ್ಣಾಯಕ ಅಂಶಗಳು.

**–ಆಶಾ ಸಿಂಗ್, ಮಕ್ಕಳಲ್ಲಿ ಉತ್ಸಾಹದ ಜೀವಕಳೆ ತುಂಬಿ ಅವರ ಮನಸ್ಸುಗಳೊಂದಿಗೆ ತೊಡಗುವುದು, ಪು.17**